ಈ) ಹಾಗಿಲ್ಲದಿದ್ದಲ್ಲಿ ಯಾವಾಗ ಮಂಜೂರು ಮಾಡಿ ಕಾರ್ಯಗತ ಗೊಳಿಸಲಾಗುವುದು?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು

ಆ) ಉದ್ದೇಶಿತ ಸೇತುವೆ ಹಾಗೂ, ಹೊನ್ನಾವರ ತಾಲ್ಲೂಕು ಗ್ರಾಮಕ್ಕೆ ಸಂಪರ್ಕ ರಸ್ತೆ ನಿರ್ಮಿಸುವ ಕೆಲಸದ 37.00 ಲಕ್ಷ ರೂ. ಅಂದಾಜಿಗೆ ಸರಕಾರದಿಂದ ಆಡಳಿತಾತ್ಮಕ ಅನುಮೋದನೆಯು ದೊರಕಿದ್ದು ಅಂದಾಜು ಪತ್ರಿಕೆಯು ತಾಂತ್ರಿಕವಾಗಿ ಮಂಜೂರಾಗಿದೆ.

ಇ) ಈಗಾಗಲೇ ಮಂಜೂರಾಗಿರುತ್ತದೆ

ಈ) 1998-99ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲಾಗುವುದು

ಹೊನ್ನಾವರ ಬಂದರ್‌ನಲ್ಲಿ ಹೂಳೆತ್ತುವುದು

213 (459) ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಬಂದರು ಮತ್ತು ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹೊನ್ನಾವರ ಬಂದರು ಹೂಳೆತ್ತುವ ಕಾರ್ಯವು ಇದುವರೆಗೂ ಕೈಗೆತ್ತಿ ಕೊಳ್ಳದಿರಲು ಕಾರಣಗಳೇನು;

ಆ) 1997-98 ರಲ್ಲಿ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದೇ;

ಇ) ಭಟ್ಕಳ ಬಂದರಿನ ಹೂಳೆತ್ತುವ ಕೆಲಸ ಯಾವಾಗ ಮುಗಿಸಲಾಗುವುದು;

ಈ) ಭಟ್ಕಳ ಅಳಿವೆಕೋಡಿ ಜಟ್ಟಿ ನಿರ್ಮಾಣ ಕಾರ್ಯ ವಿಳಂಬವಾಗಲು ಕಾರಣಗಳೇನು; ಯಾವಾಗ ಮುಗಿಸಲಾಗುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮೀನುಗಾರಿಕೆ ಸಚಿವರು) :

ಅ) ಹೊನ್ನಾವರ ಬಂದರಿನಲ್ಲಿ 1977-78 ನೇ ಸಾಲಿನಲ್ಲಿ ಮೊದಲ ಬಾರಿಗೆ ಹೂಳೆತ್ತುವ ಕೆಲಸವನ್ನು ಕೈಗೆತ್ತಿ ಕೊಳ್ಳಲಾಗಿತ್ತು. ಈ ಬಂದರಿನಲಿ ವಾಣಿಜ್ಯ ಚಟುವಟಿಕೆಗಳು ಪೂರ್ಣ ಸ್ಥಗಿತಗೊಂಡಿರುವುದರಿಂದ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳುತ್ತಿಲ್ಲ

ಆ) ಇಲ್ಲ

ಇ) ಜೂನ್ 1998ರ ಸಮಯಕ್ಕೆ ಪೂರ್ಣ ಗೊಳಿಸಲಾಗುವುದು

ಈ) ಜಟ್ಟಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಮತ್ತು ಗುತ್ತಿಗೆ ಕರಾರು ಪ್ರಕಾರ ಸದರಿ ಕೆಲಸವನ್ನು ಜೂನ್ 2000ಗಳ ಹೊತ್ತಿಗೆ ಮುಗಿಸುವ ನಿರೀಕ್ಷೆ ಇದೆ.